† ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಉತ್ತರದಲ್ಲಿ ಹೇಳಿರುವ ಪ್ರಕಾರ, ಅದಕ್ಕೆ ತಕ್ಕ ಜಮೀನು ಇನ್ನೂ ಒದಗದೇ ಇರುವ ಪ್ರಯುಕ್ತ, ಈ ಕೆರೆಯ ಕೆಲಸವನ್ನು ಪ್ರಾರಂಭ ಮಾಡುವುದು ಕಷ್ಟವಾಗಿದೆ.

ಶ್ರೀ ವಿ.ವಿ. ವಾಯಿ.—ಹಾಗಾದರೆ ಜಮೀನನ್ನು ಸರ್ಕಾರಕ್ಕೆ ಒದಗಿಸಿಕೊಟ್ಟರೆ ಅದನ್ನು ತೀವ್ರವಾಗಿ ಪ್ರಾರಂಭಮಾಡುತ್ತೀರಾ?

ಶ್ರೀ ಎಚ್ ಎಂ. ಚನ್ನಬಸಪ್ಪ.—ಅದು ನಮ್ಮ ಸುಪರ್ದು ಬಂದಮೇಲೆ ಇದಕ್ಕೆ ಏರ್ಪಾಡು ಮಾಡುತ್ತೇವೆ.

REPORT ON CONDITIONS OF WEAVERS OF BIJAPUR DISTRICT

313. Sri P. M. BANGI (Jamkhandi) —

Will the Minister for Industries be pleased to state:—

(a) whether it is a fact that Sri Rathod, Minister of State for Fisheries visited Weavers' Centres at (1) Chadachan (2) Banhatti (3) Jamkhandi (4) Ramapur (5) Rabakavi (6) Terdal (7) Hunagund (8) Irakali (9) Guledgud and (10) Sulebhavi in Bijapur to study the hardship and needs of suffering weavers in the drought affected areas of Bijapur District with concerned M. L. As. and the Joint Director of Industries at the instance of the Chief Minister on 4th, 5th and 6th April 1973.

(b) whether he has submitted the report this week proposing immediate reliefs to suffering weavers by supplying sufficient yarn and interest free loans to poor weavers;

(c) whether the report will be placed before this House?

Sri S. M. KRISHNA (Minister for Industries).—

(a) Yes.

(b) Yes.

(c) No-as the Report is of administrative nature.

ಶ್ರೀ ಪಿ. ಎಂ. ಬಾಂಗಿ.— (ಆ) ಪ್ರಶ್ನೆಗೆ ಉತ್ತರವಾಗಿ 'ಹೌದು' ಎಂಬುದಾಗಿ ಹೇಳಿದೆ. ಅಲ್ಲಿ ಎಷ್ಟೇ ಕಷ್ಟಪಟ್ಟರೂ ಅಲ್ಲಿನ ನೇಕಾರರಿಗೆ ಸಾಕಷ್ಟು ನೂಲು ಕೊಟ್ಟಿಲ್ಲ. ಮಾನ್ಯ ಶ್ರೀ ಕೆ. ಟಿ. ರಾಠೋಡ್ ಮಂತ್ರಿಗಳು ಇದರ ಬಗ್ಗೆ ಶಿಫಾರಸ್ಸನ್ನು

ಮಂಡಿಸಿದ್ದರೂ ಇನ್ನೂ ಇಲ್ಲಿಯವರೆಗೂ ಆ ನೇಕಾರರಿಗೆ ಇಂಟರೆಸ್ಟ್ ಫ್ರೀಲೋನನ್ನು ಕೊಟ್ಟಿಲ್ಲದೇ ಇರಲು ಕಾರಣವೇನು ?

† ಶ್ರೀ ಎಸ್. ಎಂ. ಕೃಷ್ಣ.— ಮಾನ್ಯ ಶ್ರೀ ಕೆ. ಟಿ. ರಾಠೋಡ್ ಮಂತ್ರಿಗಳು ಕೆಲವಾರು ಶಿಫಾರ್ಸುಗಳನ್ನು ಮಂಡಿಸಿದರು ಆ ಶಿಫಾರಸುಗಳು ಕಾರ್ಯಾಚರಣೆಯಾಗಬೇಕಾದರೆ, ಸುಮಾರು ೨೦ ಸಾವಿರ ನೇಕಾರರಿಗೆ ಬಿಜಾಪುರ ಜಿಲ್ಲೆಯೊಂದರಲ್ಲಿಯೇ ಪ್ರತಿಯೊಬ್ಬರಿಗೂ ೫೦೦ ರೂಪಾಯಿಗಳಂತೆ ಸಾಲ ಕೊಟ್ಟರೆ ಸುಮಾರು ೫೦ ಲಕ್ಷ ರೂಪಾಯಿಗಳನ್ನು ಸರ್ಕಾರ ಒದಗಿಸಿಕೊಡಬೇಕಾಗುತ್ತದೆ. ಇದು ಕೇವಲ ಬಿಜಾಪುರ ಜಿಲ್ಲೆಗೆ ಮಾತ್ರ ಸೀಮಿತವಾಗುವುದಿಲ್ಲ. ಬಿಜಾಪುರ, ಬೆಳಗಾಂ, ಧಾರವಾಡ ಮತ್ತು ಮಂಡ್ಯಾ ಜಿಲ್ಲೆಗಳಲ್ಲಿಯೂ ನೇಕಾರರು ಇದ್ದಾರೆ. ಸರ್ಕಾರ ಈ ಒಂದು ಜಿಲ್ಲೆಯಲ್ಲಿ ಒಂದು ಕಡೆಯೇ ಸುಮಾರು ೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಸಿದ್ಧವಾದರೆ ಮಿಕ್ಕ ಎಲ್ಲಾ ಜಿಲ್ಲೆಗಳಲ್ಲಿಯೂ ಈ ರೀತಿಯಾಗಿಯೇ ಖರ್ಚುಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಅದೇನೋ ನ್ಯಾಯವಾದಂಥ ಬೇಡಿಕೆಯೇನೋ ಸರಿ. ಆದರೆ ರಾಜ್ಯ ಸರ್ಕಾರ ಈಗ ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟಿನ ಚೌಕಟ್ಟಿನಲ್ಲಿ ನಾವು ಸುಮಾರು ೫೦ ಲಕ್ಷ ರೂಪಾಯಿಗಳನ್ನು ಇಲ್ಲಿ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂಬುದು ಒಂದು. ಆದರೆ ಇದಕ್ಕೆ ಬದಲಾಗಿ ನಾವು ಈಗಾಗಲೇ ೧೭ ರಿಲೀಫ್ ಸೆಂಟರುಗಳನ್ನು ಪ್ರಾರಂಭಮಾಡಿದ್ದೇವೆ. ಅದಕ್ಕಾಗಿ ಸುಮಾರು ೭೭ ರಿಂದ ೮೦ ಲಕ್ಷ ರೂಪಾಯಿಗಳವರೆಗೂ ಈಗಾಗಲೇ ಖರ್ಚು ಮಾಡುತ್ತಿದ್ದೇವೆ. ಇನ್ನು ಮಾನ್ಯ ಸದಸ್ಯರಾದ ಶ್ರೀ ಬಾಂಗಿಯವರಿಗೂ ಗೊತ್ತಿದೆ ಆದರೆ ನಮಗೆ ಈಗ ಇರತಕ್ಕ ಆರ್ಥಿಕ ಬಿಕ್ಕಟ್ಟಿನ ಇತಿಮಿತಿಗಳನ್ನು ನೋಡಿಕೊಂಡು ನಾವು ಈ ವಿಚಾರದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಪಿ. ಎಂ. ಬಾಂಗಿ — ಮಾನ್ಯ ಶ್ರೀ ಕೆ. ಟಿ. ರಾಠೋಡ್ ಮಂತ್ರಿಗಳು ಮೀನುಗಾರಿಕೆಯವರಿಗೆ ಸುಮಾರು ೩೦ ಲಕ್ಷ ರೂಪಾಯಿಗಳನ್ನು ಪರಿಹಾರ ರೂಪವಾಗಿ ಕೊಟ್ಟರು. ಅದೇ ರೀತಿಯಾಗಿ ಕನಿಷ್ಟಪಕ್ಷ ತಾವು ನೇಕಾರರಿಗೆ ಪ್ರತಿಯೊಬ್ಬರಿಗೂ ಕೇವಲ ೫೦ ರೂಪಾಯಿಗಳನ್ನು ಇಂಟರೆಸ್ಟ್ ಫ್ರೀ ಲೋನಾಗಿ ಕೊಟ್ಟರೆ ಅದರಿಂದ ಅವರಿಗೆ ಬಹಳಮಟ್ಟಿಗೆ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನು ಮಾನ್ಯ ಮಂತ್ರಿಗಳು ವಿಚಾರಮಾಡುತ್ತಾರೆಯೇ ?

ಶ್ರೀ ಎಸ್. ಎಂ. ಕೃಷ್ಣ.— ಈಗಾಗಲೇ ಬಿಜಾಪುರ ಜಿಲ್ಲೆಯಲ್ಲಿ ಕೋಆಪರೇಟಿವ್ ಬ್ಯಾಂಕ್ ಮತಿಯಿಂದ ಒಂದಷ್ಟು ಹಣವನ್ನು ಅಲ್ಲಿನ ನೇಕಾರರಿಗೆ ಸಾಲದ ರೂಪದಲ್ಲಿ ಕೊಟ್ಟಿದ್ದಾರೆ. ಅಗೂ ಅಲ್ಲದೆ ರಿಜರ್ವ ಬ್ಯಾಂಕಿನವರಿಗೆ ಇನ್ನೂ ಹೆಚ್ಚಿನ ಹಣವನ್ನು ಈ ಜಿಲ್ಲಾ ಕೋಆಪರೇಟಿವ್ ಬ್ಯಾಂಕಿಗೆ ಕೊಡಬೇಕೆಂದು ಸರ್ಕಾರದವರು ಶಿಫಾರಸುಮಾಡುತ್ತಾರೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.— ತಾವು ಉತ್ತರ ಕೊಡುವಾಗ ಇದು ಬಹಳ ಮಹತ್ವವಾದಂಥ ಬೃಹದಾಕಾರದ ಸಮಸ್ಯೆ ಎಂಬುದಾಗಿ ಹೇಳಿದಿರಿ.

ಬೆಂಗಳೂರಿನ ಕಬ್ಬನಪೇಟೆ ಮತ್ತು ಸಂಪಂಗಿರಾಮನಗರಗಳಲ್ಲಿಯೂ ನೇಕಾರರಿಗೆ ರಿಲೀಫ್ ಮೆಷರ್ಸನ್ನು ಯಾವರೀತಿಯಾಗಿ ಬಿಜಾಪುರ ಜಿಲ್ಲೆಯಲ್ಲಿ ಒದಗಿಸುತ್ತೀರೋ ಆ ರೀತಿಯಾಗಿ ಒದಗಿಸಿಕೊಡುತ್ತೀರಾ ?

ಅಧ್ಯಕ್ಷರು.— ಈಗ ಆ ಪ್ರಶ್ನೆ ಉದ್ಭವಿಸುವುದಿಲ್ಲ.

Sri MALLIKARJUN KHARGE.— The Government is kind enough to start collective weaving centres in drought affected areas. Will the Government continue this scheme atleast for one year ?

Sri S. M. KRISHNA.— This was part of the drought relief programme the State Government had taken up. Now the question of continuing these relief centres is engaging active consideration of Government.

ಶ್ರೀ ಪಿ ಎಂ. ಬಾಂಗಿ— ಬಿಜಾಪುರ ಜಿಲ್ಲೆಯಲ್ಲಿ ಕೇವಲ ೩ ರಿಲೀಫ್ ಸೆಂಟರುಗಳನ್ನು ತೆರೆದಿರುವುದರಿಂದ ಸ್ವಲ್ಪ ಜನರಿಗೆ ಅಂದರೆ ಕೇವಲ ೩೦೦ ಜನರಿಗೆ ಮಾತ್ರ ಅದರಿಂದ ಪ್ರಯೋಜನವಾಗಿದೆ. ಅಲ್ಲಿರತಕ್ಕವರು ೩೨ ಸಾವಿರ ಜನ ನೇಕಾರರು ಅಂದಮೇಲೆ ಉಳಿದ ನೇಕಾರರಿಗೆ ಇವತ್ತು ನೂಲನ್ನು ಕೊಟ್ಟಿಲ್ಲ. ಅವರು ನಿರ್ಗತಿಕರಾಗಿದ್ದಾರೆ. ಇದರ ಪರಿಣಾಮವಾಗಿ ಅನೇಕರು ಅಲ್ಲಿ ಉಪವಾಸ ಮಾಡುತ್ತಿದ್ದಾರೆ. ಆದ್ದರಿಂದ ಅವರ ಬಗ್ಗೆ ಸರ್ಕಾರ ಈಗಲಾದರೂ ಗಮನಿಸುತ್ತದೆಯೇ ?

ಶ್ರೀ ಎಸ್. ಎಂ. ಕೃಷ್ಣ.— ನೇಕಾರರಿಗೆ ಬಹಳ ಕಷ್ಟ ಪರಿಸ್ಥಿತಿ ಬಂದಿದೆ ಯೆಂಬುದು ಸರ್ಕಾರದವರಿಗೆ ಗೊತ್ತಿದೆ ಅದಕ್ಕಾಗಿ ಈಗಾಗಲೇ ಸರ್ಕಾರದವರು ಅವರಿಗೆ ನೂಲನ್ನು ವಿತರಣೆಮಾಡತಕ್ಕ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾರೆ. ೪೦ ನಂಬರ್ ಕೌಂಟಿನ ನೂಲಿನವರೆಗೂ ಡಿ–ಕಂಟ್ರೋಲ್ ಮಾಡಿದ್ದೇವೆ. ಅದಕ್ಕೆ ಮೇಲ್ಪಟ್ಟ ನಂಬರ್ ಕೌಂಟಿನ ನೂಲನ್ನು ಹೆಚ್ಚಿಗೆ ಸ್ಟಾಕ್ ಮಾಡಿದೆ ಈಗ ಪ್ರತಿ ಯೊಂದು ಜಿಲ್ಲೆಯಲ್ಲಿಯೂ ಹಂಚಿದ್ದೇವೆ. ಅದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಿ ದ್ದೇವೆ ದೇಶದಲ್ಲಿರತಕ್ಕ ನೂಲಿನ ಅಭಾವ ಪರಿಸ್ಥಿತಿಯನ್ನು ಸರ್ಕಾರ ಗಮನಿಸಿಕೊಂಡು ನಮ್ಮ ರಾಜ್ಯದಲ್ಲಿರತಕ್ಕ ಮಿಲ್ಲುಗಳು ಏನಿವೆಯೋ ಅವು ಎಲ್ಲ ನೂಲನ್ನೂ ನಮ್ಮ ರಾಜ್ಯದಲ್ಲಿಯೇ ಉಪಯೋಗಿಸಿಕೊಳ್ಳುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುತ್ತಿದ್ದೇವೆ ಆದ್ದರಿಂದ ಸರ್ಕಾರದವರು ನೇಕಾರರ ಒಳಿತಿಗೋಸ್ಕರ ಎಲ್ಲವನ್ನೂ ಮಾಡುವುದಕ್ಕೆ ಸಾಧ್ಯವಾಗದೇ ಹೋದರೂ ಕೂಡ ಸಾಕಾದಷ್ಟು ಕೆಲಸಕಾರ್ಯಗಳನ್ನು ಈಗಾಗಲೇ ಮಾಡಿದ್ದಾರೆಂದು ನನ್ನ ಅಭಿಪ್ರಾಯ.